**All India Radio: Bangalore**
**National Bulletin In Kannada**
**22.06.2025 1.10 p.m.**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

1. ಅಮೆರಿಕ ದಾಳಿ ಬೆನ್ನಲ್ಲೆ ಇಸ್ರೇಲ್ ಮೇಲೆ ೩೦ ಕ್ಷಿಪಣಿ ದಾಳಿ ನಡೆಸಿದ ಇರಾನ್
2. ಪಹಲ್ಗಾಮ್ ಭಯೋತ್ಪಾದಕ ದಾಳಿ ಪ್ರಕರಣ; ಉಗ್ರರಿಗೆ ಆಶ್ರಯ ನೀಡಿದ್ದ ಇಬ್ಬರು ಆರೋಪಿಗಳ ಬಂಧನ
3. ಛತ್ತೀಸ್‌ಗಡದಲ್ಲಿಂದು ರಾಷ್ಟ್ರೀಯ ವಿಧಿ ವಿಜ್ಞಾನ ವಿಶ್ವವಿದ್ಯಾಲಯ ಉದ್ಘಾಟಿಸಲಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ
4. ಭಾರತ- ಇಂಗ್ಲೆಂಡ್ ಟೆಸ್ಟ್ ಕ್ರಿಕೆಟ್; ಮೂರನೇ ದಿನದಾಟ ಇಂದು ಅಪರಾಹ್ನ ೩.೩೦ ಕ್ಕೆ ಆರಂಭ

<><><><>

ಇರಾನ್‌ನ ಮೂರು ಪರಮಾಣು ಸೌಲಭ್ಯಗಳ ಮೇಲೆ ಅಮೆರಿಕ ದಾಳಿ ನಡೆಸಿದ ಕೆಲವೇ ಗಂಟೆಗಳಲ್ಲಿ ಇರಾನ್, ಇಸ್ರೇಲ್ ಮೇಲೆ ೩೦ ಕ್ಕೂ ಹೆಚ್ಚು ಕ್ರಿಪಣಿ ದಾಳಿ ನಡೆಸಿದೆ. ಇಸ್ರೇಲ್‌ನ ತುರ್ತು ಸೇವೆ ವರದಿ ಪ್ರಕಾರ, ಇತ್ತೀಚಿನ ದಾಳಿಯಲ್ಲಿ ಕನಿಷ್ಠ ೧೬ ಮಂದಿ ಗಾಯಗೊಂಡಿದ್ದಾರೆ. ಈ ನಡುವೆ ಒಂದು ಕ್ಷಿಪಣಿ ಇಸ್ರೇಲ್‌ನ ಹೈಫಾ ಪ್ರದೇಶಕ್ಕೆ ಅಪ್ಪಳಿಸಿದ್ದು, ಈ ವೇಳೆ ಯಾವುದೇ ಮುನ್ನೆಚ್ಚರಿಕೆ ಸೈರನ್ ಮೊಳಗದಿರುವುದು ಕ್ಷಿಪಣಿ ಮುನ್ನೆಚ್ಚರಿಕಾ ವ್ಯವಸ್ಥೆಯ ಸಂಭಾವ್ಯ ಲೋಪಗಳ ಕುರಿತು ಆತಂಕ ಮೂಡಿಸಿದೆ. ದಾಳಿಯಾದ ಇತರೆಡೆ ಸೈರನ್ ಮೊಳಗಿದೆ. ಇರಾನ್ ಮೇಲೆ ತಾನು ನಡೆಸಿದ ದಾಳಿಯ ಬೆನ್ನಲ್ಲೆ ಅಮೆರಿಕ ನ್ಯೂಯಾರ್ಕ್ ಮತ್ತು ವಾಷಿಂಗ್ಟನ್‌ನಂತಹ ಪ್ರಮುಖ ನಗರಗಳು ಹಾಗೂ ಧಾರ್ಮಿಕ, ಸಾಂಸ್ಕೃತಿಕ ಮತ್ತು ರಾಜತಾಂತ್ರಿಕ ತಾಣಗಳು ಸೇರಿದಂತೆ ವಿವಿಧ ಸೂಕ್ಷ್ಮ ಪ್ರದೇಶಗಳಲ್ಲಿ ಮಿಲಿಟರಿ ಪಡೆಗಳನ್ನು ನಿಯೋಜಿಸಿದ್ದು, ಹೈಅಲರ್ಟ್‌ನಲ್ಲಿರುವಂತೆ ಸೂಚಿಸಿದೆ. ಅಮೆರಿಕ ಸೇನೆ ಇರಾನ್ ಮೂರು ಪ್ರಮುಖ ಪರಮಾಣ ತಾಣಗಳ ಮೇಲೆ ನಡೆಸಿದ ದಾಳಿಯನ್ನು ಇರಾನ್ ವಿದೇಶಾಂಗ ಸಚಿವ ಸಯ್ಯದ್ ಅಬ್ಬಾಸ್ ಅರಘ್ಚಿ ತೀವ್ರವಾಗಿ ಖಂಡಿಸಿದ್ದಾರೆ. ವಿಶ್ವಸಂಸ್ಥೆ ಮಾರ್ಗಸೂಚಿ, ಅಂತಾರಾಷ್ಟ್ರೀಯ ಕಾನೂನು ಮತ್ತು ಅಣು ಪರಮಾಣು ನಿರ್ವಹಣಾ ಒಪ್ಪಂದವನ್ನು ಅಮೆರಿಕ ಉಲ್ಲಂಘಿಸಿದೆ ಎಂದು ಆರೋಪಿಸಿದ್ದಾರೆ. ವಿಶ್ವಸಂಸ್ಥೆ ಭದ್ರತಾ ಮಂಡಳಿಯ ಖಾಯಂ ಸದಸ್ಯ ರಾಷ್ಟ್ರವಾಗಿರುವ ಅಮೆರಿಕ ಈ ಕ್ರಮ ಕೈಗೊಂಡಿರುವುದು ಖಂಡನೀಯ. ಇದರಿಂದಾಗಿ ಅಮೆರಿಕ ಘೋರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂದು ಸಚಿವರು ಹೇಳಿದ್ದಾರೆ.

<><><><>

ಇರಾನಿನ ಪರಮಾಣು ತಾಣಗಳ ಮೇಲೆ ಅಮೆರಿಕದ ವೈಮಾನಿಕ ದಾಳಿಯ ನಂತರ ವಿಕಿರಣ ಮಟ್ಟದಲ್ಲಿ ಯಾವುದೇ ಏರಿಕೆ ಕಂಡುಬಂದಿಲ್ಲ ಎಂದು ಅಂತರರಾಷ್ಟ್ರೀಯ ಪರಮಾಣು ಶಕ್ತಿ ಸಂಸ್ಥೆ ತಿಳಿಸಿದೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ವಿಶ್ವಸಂಸ್ಥೆಯ ಪರಮಾಣು ನಿಗಾ ಸಂಸ್ಥೆ, ಈವರೆಗೆ ವಿಕಿರಣ ಮಟ್ಟದಲ್ಲಿ ಯಾವುದೇ ಹೆಚ್ಚಳ ವರದಿಯಾಗಿಲ್ಲ ಎಂದು ದೃಢಪಡಿಸಿದೆ. ಹೆಚ್ಚಿನ ಮಾಹಿತಿ ಲಭ್ಯವಾದಂತೆ ಹೆಚ್ಚಿನ ಮೌಲ್ಯಮಾಪನಗಳನ್ನು ಒದಗಿಸಲಾಗುವುದು ಎಂದು ತಿಳಿಸಲಾಗಿದೆ.

<><><><>

ಈ ನಡುವೆ ರಾಷ್ಟ್ರವನ್ನುದ್ದೇಶಿಸಿ ಮಾತನಾಡಿರುವ ಅಮೆರಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಇರಾನ್‌ನ ಪರಮಾಣು ತಾಣಗಳ ಮೇಲೆ ನಡೆದ ದಾಳಿಯನ್ನು ವಿಶೇಷ ಯಶಸ್ವಿ ಎಂದು ಬಣ್ಣಿಸಿದ್ದಾರೆ. ಇರಾನ್‌ನ ಪರಮಾಣು ಸಾಮರ್ಥ್ಯಕ್ಕೆ ಅಡ್ಡಿಪಡಿಸುವುದು ಮತ್ತು ಭಯೋತ್ಪಾದನೆಯನ್ನು ಪ್ರಯೋಜಿಸುವ ವಿಶ್ವದ ಅಗ್ರ ರಾಷ್ಟ್ರವೊಂದರಿಂದ ಎದುರಾಬಹುದಾದ ಪರಮಾಣು ಬೆದರಿಕೆಗೆ ತಡೆಯೊಡ್ಡುವುದು ಈ ದಾಳಿಗಳ ಉದ್ದೇಶವಾಗಿದೆ. ಅಮೆರಿಕ ಭದ್ರತೆ ಮತ್ತು ಜಾಗತಿಕ ಶಾಂತಿಯ ದೃಷ್ಟಿಯಿಂದ ಈ ಅಗತ್ಯ ಕ್ರಮ ಕೈಗೊಂಡಿದೆ ಎಂದು ಅಧ್ಯಕ್ಷ ಟ್ರಂಪ್ ಹೇಳಿದ್ದಾರೆ.

<><><><>

ಇಸ್ರೇಲ್-ಇರಾನ್ ನಡುವಿನ ಉದ್ವಿಘ್ನತೆ ಹೆಚ್ಚುತ್ತಿರುವ ನಡುವೆ ಪಶ್ಚಿಮ ಇರಾನ್‌ನಲ್ಲಿರುವ ಹಲವು ಮಿಲಿಟರಿ ತಾಣಗಳು ಹಾಗೂ ಕ್ಷಿಪಣಿ ವಾಹಕಗಳನ್ನು ಗುರಿಯಾಗಿಸಿ ದಾಳಿ ನಡೆಸಲಾಗಿದೆ ಎಂದು ಇಸ್ರೇಲ್ ಮಿಲಿಟರಿ ತಿಳಿಸಿದೆ.

<><><>

ಪಹಲ್ಗಾಂ ಭಯೋತ್ಪಾದಕ ದಾಳಿ ಪ್ರಕರಣಕ್ಕೆ ಕುರಿತ ಮಹತ್ವದ ಬೆಳವಣಿಗೆಯೊಂದರಲ್ಲಿ ರಾಷ್ಟ್ರೀಯ ತನಿಖಾ ಸಂಸ್ಥೆ-ಎನ್‌ಐಎ ದಾಳಿಯನ್ನೆಸಗಿದ ಭಯೋತ್ಪಾದಕರಿಗೆ ಆಶ್ರಯ ನೀಡಿದ ಆರೋಪದಡಿ ಇಬ್ಬರನ್ನು ಬಂಧಿಸಿದೆ. ಬಟ್ಕೋಟ್‌ನ ಪರ್ವೇಜ್ ಅಹ್ಮದ್ ಜೋಥರ್ ಮತ್ತು ಪಹಲ್ಗಾಂನ ಹಿಲ್ ಪಾರ್ಕ್‌ನ ಬಶೀರ್ ಅಹ್ಮದ್ ಜೋಥರ್ ಎಂಬ ಬಂಧಿತ ಇಬ್ಬರು ದಾಳಿಯಲ್ಲಿ ಭಾಗವಹಿಸಿದ್ದ ಮೂರು ಭಯೋತ್ಪಾದಕರ ವಿವರಗಳನ್ನು ಬಹಿರಂಗಪಡಿಸಿದ್ದಾರೆ ಎಂದು ಎನ್‌ಐಎ ತಿಳಿಸಿದೆ. ಬಂಧಿತರು ನೀಡಿದ ಮಾಹಿತಿಯ ಪ್ರಕಾರ, ಅವರು ಪಾಕಿಸ್ತಾನದ ನಾಗರಿಕರು ಹಾಗೂ ನಿಷೇಧಿತ ಲಷ್ಕರ್-ಎ-ತೋಯ್ಬಾ ಭಯೋತ್ಪಾದಕ ಸಂಘಟನೆಗೆ ಸೇರಿದವರಾಗಿದ್ದಾರೆ ಎಂಬುದನ್ನು ದೃಢಪಡಿಸಿದ್ದಾರೆ. ಎನ್‌ಐಎ ಪ್ರಕಾರ, ದಾಳಿ ನಡೆಯುವ ಮುನ್ನ, ಪರ್ವೇಜ್ ಮತ್ತು ಬಶೀರ್ ಇಬ್ಬರೂ ಭಯೋತ್ಪಾದಕರಿಗೆ ಹಿಲ್ ಪಾರ್ಕ್‌ನಲ್ಲಿ ಆಶ್ರಯ ನೀಡಿದ್ದರು. ಬಂಧಿತರು ಭಯೋತ್ಪಾದಕರಿಗೆ ಆಹಾರ, ಆಶ್ರಯ ಮತ್ತು ಸರಕು-ಸಹಕಾರ ನೀಡಿದ್ದರು. ಎನ್‌ಐಎ ಇಬ್ಬರನ್ನೂ ಅಕ್ರಮ ಚಟುವಟಿಕೆಗಳ ತಡೆಗಟ್ಟುವಿಕೆ ಕಾಯ್ದೆಯಡಿಯಲ್ಲಿ ಬಂಧಿಸಿದೆ.

<><><>

ಕೇಂದ್ರ ಗೃಹ ಸಚಿವ ಅಮಿತ್ ಶಾ ಇಂದಿನಿಂದ ಎರಡು ದಿನಗಳ ಕಾಲ ಛತ್ತೀಸ್‌ಗಢ ಪ್ರವಾಸ ಕೈಗೊಳ್ಳಲಿದ್ದಾರೆ. ಭೇಟಿಯ ಭಾಗವಾಗಿ ಅವರು, ರಾಜ್ಯ ರಾಜಧಾನಿ ರಾಯಪುರ ಮತ್ತು ನಾರಾಯಣಪುರ ಜಿಲ್ಲೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ರಾಯಪುರದಲ್ಲಿಂದು ಅವರು ರಾಷ್ಟ್ರೀಯ ವಿಧಿವಿಜ್ಞಾನ ವಿಶ್ವವಿದ್ಯಾಲಯ ಮತ್ತು ಕೇಂದ್ರೀಯ ವಿಧಿವಿಜ್ಞಾನ ಪ್ರಯೋಗಾಲಯದ ನೂತನ ಕ್ಯಾಂಪಸ್‌ಗಳಿಗೆ ಶಿಲಾನ್ಯಾಸ ನೆರವೇರಿಸಲಿದ್ದಾರೆ. ಸುಮಾರು ೪೦ ಎಕರೆ ವಿಸ್ತೀರ್ಣದಲ್ಲಿ, ಸುಮಾರು ೪೦೦ ಕೋಟಿ ರೂಪಾಯಿ ವೆಚ್ಚದಲ್ಲಿ ಈ ವಿಶ್ವವಿದ್ಯಾಲಯ ನಿರ್ಮಾಣವಾಗಲಿದೆ. ಇಂದು ನವಾ ರಾಯಪುರದಲ್ಲಿ, ಛತ್ತೀಸ್‌ಗಢ ಹಾಗೂ ನೆರೆಹೊರೆ ರಾಜ್ಯಗಳ ಪೊಲೀಸ್ ಮಹಾನಿರ್ದೇಶಕರೊಂದಿಗೆ ಹಾಗೂ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರೊಂದಿಗೆ ಭದ್ರತಾ ಸಂಬಂಧಿತ ವಿಷಯಗಳ ಕುರಿತು ಸಚಿವ ಅಮಿತ್ ಶಾ ಸಭೆ ನಡೆಸಲಿದ್ದಾರೆ. ಮತ್ತೊಂದು ಸಭೆಯಲ್ಲಿ ಅವರು, ಎಡಪಂಥೀಯ ಉಗ್ರವಾದ ಕುರಿತ ಭದ್ರತಾ ಸ್ಥಿತಿಗತಿಯನ್ನೂ ಪರಿಶೀಲನೆ ನಡೆಸಲಿದ್ದಾರೆ. ಛತ್ತೀಸ್‌ಗಢ ಪ್ರವಾಸದ ಎರಡನೇ ದಿನವಾದ ನಾಳೆ, ಅವರು ಬಸ್ತರ್ ವಿಭಾಗದ ನಾರಾಯಣಪುರ ಜಿಲ್ಲೆಯ ಅಬುಜ್ಮಾಡ್ ಪ್ರದೇಶಕ್ಕೆ ಭೇಟಿ ನೀಡಲಿದ್ದು, ಸ್ಥಳೀಯ ಗ್ರಾಮಸ್ಥರೊಂದಿಗೆ ಸಂವಾದ ನಡೆಸಲಿದ್ದಾರೆ. ನಾರಾಯಣಪುರ ಜಿಲ್ಲೆಯ ಇರಕ್‌ಭಟ್ಟಿ ಪ್ರದೇಶದಲ್ಲಿರುವ ಗಡಿ ಭದ್ರತಾ ಪಡೆಯ ಶಿಬಿರಕ್ಕೆ ಭೇಟಿ ನೀಡಲಿರುವ ಅವರು, ಅಲ್ಲಿ ನಿಯೋಜಿತ ಯೋಧರೊಂದಿಗೆ ಸಂವಾದ ನಡೆಸಲಿದ್ದಾರೆ.

<><><>

ನವದೆಹಲಿಯ ಜವಾಹರ್ ಲಾಲ್ ನೆಹರು ಕ್ರಿಕೆಟ್ ಕ್ರೀಡಾಂಗಣದಲ್ಲಿಂದು ಕೇಂದ್ರ ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವ ಡಾ.ಮನ್ಸೂಖ್ ಮಾಂಡವೀಯ ಒಲಿಂಪಿಕ್ ಡೇ ರನ್ ಗೆ ಚಾಲನೆ ನೀಡಿದರು. ಈ ವೇಳೆ ಮಾತನಾಡಿದ ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ, ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ದೇಶ ಉತ್ತಮ ಕ್ರೀಡಾ ಮೂಲಸೌಕರ್ಯ ಮತ್ತು ಕ್ರೀಡಾಪಟುಗಳಿಗೆ ಉತ್ತಮ ಸೌಲಭ್ಯ ಒದಗಿಸುವೆಡೆಗೆ ಮುನ್ನಡೆಯುತ್ತಿದೆ. ೨೦೩೬ ರ ಒಲಿಂಪಿಕ್ ಕ್ರೀಡಾಕೂಟವನ್ನು ಆಯೋಜಿಸಲು ರಾಷ್ಟ್ರ ಸಂಪೂರ್ಣವಾಗಿ ಸಿದ್ಧವಿದೆ ಎಂದು ತಿಳಿಸಿದ್ದಾರೆ.

ಕಾರ್ಯಕ್ರಮದ ಭಾಗವಾಗಿ ಕೇಂದ್ರ ಸಚಿವ ಮನ್ಸೂಖ್ ಮಾಂಡವೀಯ ಆರೋಗ್ಯ ಮತ್ತು ಪರಿಸರದ ಕುರಿತಂತೆ ಜಾಗೃತಿ ಮೂಡಿಸಲು 'ಫಿಟ್ ಇಂಡಿಯಾ ಸಂಡೆ ಆನ್ ಸೈಕಲ್' ಅಭಿಯಾನಕ್ಕೆ ಚಾಲನೆ ನೀಡಿದರು.

<><><>

ಕೇಂದ್ರ ರಕ್ಷಣಾ ಖಾತೆ ರಾಜ್ಯ ಸಚಿವ ಸಂಜಯ್ ಸೇಠ್, ನಾಳೆಯಿಂದ ಇದೇ ೨೬ರವರೆಗೆ ಕೀನ್ಯಾ ಮತ್ತು ಮಡಗಾಸ್ಕರ್ ಪ್ರವಾಸ ಕೈಗೊಳ್ಳಲಿದ್ದಾರೆ. ಪ್ರವಾಸದ ಮೊದಲನೇ ಚರಣದಲ್ಲಿ ಅವರು, ಕೀನ್ಯಾಗೆ ಭೇಟಿ ನೀಡಲಿದ್ದು, ತೈಟಾ- ತಾವೇಟಾ ಕೌಂಟಿಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಪ್ರವಾಸದ ಎರಡನೇ ಚರಣದಲ್ಲಿ ಅವರು, ಮಡಗಾಸ್ಕರ್ ರಾಜಧಾನಿ ಅಂಟಾ ನಾನಾರಿವೊದಲ್ಲಿ ನಡೆಯುವ ೬೫ನೇ ಮಡಗಾಸ್ಕರ್ ಸ್ವಾತಂತ್ರ್ಯ ದಿನಾಚರಣೆ ಮತ್ತು ಮಡಗಾಸ್ಕರ್ ಸಶಸ್ತ್ರ ಪಡೆ ಸಂಸ್ಥಾಪನಾ ದಿನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

<><><>

ಒಂಭತ್ತನೇ ಚೀನಾ-ದಕ್ಷಿಣ ಏಷ್ಯಾ, ಎಕ್ಸ್‌ಪೊ ಮತ್ತು ಆರನೇ ಚೀನಾ-ದಕ್ಷಿಣಾ ಏಷ್ಯಾ ಸಹಕಾರ ಸಭೆಯ ನೇಪಥ್ಯದಲ್ಲಿ ಚೀನಾದ ಕುನ್ಮಿಂಗ್‌ನಲ್ಲಿ ಬಾಂಗ್ಲಾದೇಶ, ಚೀನಾ ಮತ್ತು ಪಾಕಿಸ್ತಾನ ಅನೌಪಚಾರಿಕ ಸಭೆ ನಡೆಸಿವೆ. ಸಭೆಯಲ್ಲಿ ಬಾಂಗ್ಲಾದೇಶದ ಮಾಜಿ ಹಂಗಾಮಿ ವಿದೇಶಾಂಗ ಕಾರ್ಯದರ್ಶಿ ಮಹಮ್ಮದ್ ರುಹುಲ್ ಅಲಾಮ್ ಸಿದ್ದಿಕಿ, ಚೀನಾದ ಉಪ ವಿದೇಶಾಂಗ ಸಚಿವ ಸುನ್ ವೇಡಾಂಗ್ ಮತ್ತು ಪಾಕಿಸ್ತಾನದ ಅಪರ ವಿದೇಶಾಂಗ ಕಾರ್ಯದರ್ಶಿ ಇಮ್ರಾನ್ ಅಹಮ್ಮದ್ ಸಿದ್ದಿಕಿ ನೇತೃತ್ವದ ನಿಯೋಗಗಳು ಭಾಗವಹಿಸಿದ್ದವು.

<><><>

ಅಂಡರ್ಸನ್-ಟೆಂಡೂಲ್ಕರ್ ಟ್ರೋಫಿಯ ಮೊದಲ ಟೆಸ್ಟ್ ಕ್ರಿಕೆಟ್ ಪಂದ್ಯದಲ್ಲಿ ನಿನ್ನೆ ದಿನದಾಟದಂತ್ಯಕ್ಕೆ ೩ ವಿಕೆಟ್ ನಷ್ಟಕ್ಕೆ ೨೦೯ ರನ್ ಗಳಿಸಿರುವ ಆತಿಥೇಯ ಇಂಗ್ಲೆಂಡ್ ತಂಡ ೩ನೇ ದಿನವಾದ ಇಂದು ಮೊದಲ ಇನ್ನಿಂಗ್ಸ್‌ನ ಆಟ ಮುಂದುವರಿಸಲಿದ್ದು, ಭಾರತದ ೪೭೧ ರನ್‌ಗಳನ್ನು ಬೆನ್ನತ್ತಿ ಆಡಲಿದೆ. ನಿನ್ನೆ ದಿನಾಂತ್ಯದ ವೇಳೆಗೆ, ಒಲಿ ಪೊಪ್ ಶತಕ ಪೂರೈಸಿ ಅಜೇಯರಾಗಿ ಉಳಿದಿದ್ದು, ಹ್ಯಾರಿ ಬ್ರೂಕ್ ಖಾತೆ ತೆರೆಯಬೇಕಿದೆ. ಭಾರತದ ಪರ ಜಸ್‌ಪ್ರೀತ್ ಬೂಮ್ರಾ ಮೂರು ವಿಕೆಟ್ ಪಡೆದಿದ್ದಾರೆ. ಇಂದು ಇಂಗ್ಲೆಂಡ್ ಬ್ಯಾಟರ್‌ಗಳಿಗೆ ಕಡಿವಾಣ ಹಾಕುವ ತವಕದಲ್ಲಿ ಭಾರತದ ಬೌಲರ್‌ಗಳು ಕಣಕ್ಕಿಳಿಯಲಿದ್ದಾರೆ. ಇಂದಿನ ಆಟ ಭಾರತೀಯ ಕಾಲಮಾನ ೩.೩೦ ಕ್ಕೆ ಆರಂಭವಾಗಲಿದೆ.

<><><>

ಭಾರತ ಮತ್ತು ಶ್ರೀಲಂಕಾದ ಆತಿಥ್ಯದಲ್ಲಿ ನಡೆಯಲಿರುವ ೨೦೨೬ ಐಸಿಸಿ ಪುರುಷರ ಟಿ-೨೦ ವಿಶ್ವಕಪ್ ಕ್ರಿಕೆಟ್‌ಗೆ ಕೆನಡಾ ಅಧಿಕೃತವಾಗಿ ಅರ್ಹತೆ ಪಡೆದುಕೊಂಡಿದೆ. ಅರ್ಹತಾ ಸುತ್ತಿನ ಪಂದ್ಯದಲ್ಲಿ ಬಹಮಾಸ್ ವಿರುದ್ಧ ಗೆಲುವು ಸಾಧಿಸಿ, ವಿಶ್ವಕಪ್‌ನಲ್ಲಿ ತನ್ನ ಸ್ಥಾನವನ್ನು ಖಚಿತಪಡಿಸಿಕೊಂಡಿದೆ. ಇದು ಕೆನಡಾದ ಸತತ ಐದನೇ ಗೆಲುವಾಗಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>